ಓ ಎಸ್ ನಂ.67/2024
ಡಿ.ಡಬ್ಲ್ಯೂ -1 ಮಲ್ಲಮ್ಮ ಗಂಡ ಶಂಕರ ಕೊಳ್ಳೂರ

(ಇಂದು ದಿನಾಂಕಃ **18-2-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಡಿ ಬಿ ಪಿ ವಕೀಲರಿಂದ.

ಜಮೀನು ಖರೀದಿ ಮಾಡುವ ಮೊದಲು ದಾಖಲೆಗಳನ್ನು ನಾವು ನೋಡಿರುತ್ತೇವೆ. ದಾವಾ ಜಮೀನು ವಾದಿ ಮತ್ತು ೧ ರಿಂದ ೩ನೇ ಪ್ರತಿವಾದಿಗಳ ಹಿರಿಯರಿಂದ ಬಂದ ಆಸ್ತಿಯಾಗಿದೆ ಎಂದರೆ ಸರಿ. ಜಮೀನು ಖರೀದಿ ಆಗುವ ೨ ವರ್ಷ ಮೊದಲೆ ವಾದಿಯ ಮದುವೆ ಆಗಿತ್ತು ಎಂದರೆ ಸರಿಯಲ್ಲ. ವಾದಿಯ ಮದುವೆ ಯಾವ ದಿನಾಂಕದಂದು ಆಗಿದೆ ಎಂದು ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿಯ ಮಕ್ಕಳಾದ ವಾದಿ ಮತ್ತು ೨ ಮತ್ತು ೩ನೇ ಪ್ರತಿವಾದಿಗಳ ಒಪ್ಪಿಗೆ ಸಹಿಯನ್ನು ಖರೀದಿ ಪತ್ರಕ್ಕೆ ಪಡೆಯಲು ನಾವು ಪ್ರಯತ್ನ ಮಾಡಿರುತ್ತೇವೆ. ಅವರಿಗೆ ಆ ಕುರಿತು ನೋಟಿಸು ಕಳುಹಿಸಿದ ಬಗ್ಗೆ ನನ್ನ ಗಂಡನಿಗೆ ಗೊತ್ತು, ಅದು ನನಗೆ ಗೊತ್ತಿಲ್ಲ. ಖರೀದಿ ಪತ್ರವನ್ನು ನನ್ನ ಗಂಡನೆ ತಯಾರು ಮಾಡಿಸಿದ್ದು, ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

೨. ೧ನೇ ಪ್ರತಿವಾದಿ ಮಹಾದೇವಪ್ಪರವರು ಕುಡಿತದ ಚಟ ಹೊಂದಿದ್ದ ಎಂದರೆ ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿಗೆ ಸಾರಾಯಿ ಕುಡಿಸಿ, ನನ್ನ ಗಂಡ ಒಂದು ಸುಳ್ಳು ಖರೀದಿ ಪತ್ರ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ವಾದಿಗೂ ಕೂಡಾ ದಾವಾ ಆಸ್ತಿಯಲ್ಲಿ ಪಾಲು ಇದೆ ಎಂದರೆ ಸಾಕ್ಷಿಯು ಅವರ ಮದುವೆ ಸಲುವಾಗಿಯೆ ನಮಗೆ ಒತ್ತಾಯ ಮಾಡಿ, ಜಮೀನು ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಮಾರಾಟ ಮಾಡುವಾಗ ವಾದಿ ಬಂದಿರಲಿಲ್ಲ ಅವರ ತಂದೆಯಾದ ೧ನೇ ಪ್ರತಿವಾದಿ ಮಹಾದೇವಪ್ಪರವರು ಬಂದಿದ್ದರು ಮತ್ತು ಅವರು ತಮ್ಮ ಜೊತೆ ೪ ಜನರನ್ನೂ ಕೂಡಾ ಕರೆದುಕೊಂಡು ಬಂದಿದ್ದರು.

೩.	ವಾದಿಗೆ ಪಾಲು ಹೋಗಬಾರದು ಎಂಬ ಉದ್ದೇಶದಿಂದ ನಾನು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ೧ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಈಗ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾವೆ ಸಾಗುವಳಿ ಮಾಡುತ್ತಿದ್ದೇವೆ ಎನ್ನುತ್ತಾರೆ.

ಮರುವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ